ಕ್ಯಾನ್ಸರ್ ನಿರೋಧಕಗಳನ್ನು ತಯಾರಿಸುವ ಹಲವು ಕಂಪನಿಗಳು ತಮ್ಮ ಉತ್ಪನ್ನಗಳಿಗೆ ಈ ಕರಿ ವೀಳ್ಯೆದಲೆ ಬಳಸುತ್ತವೆ. ಬೆಳೆಯುವ ರೈತನಿಗೆ ಇದರಿಂದ ಕೊಂಚ ಹೆಚ್ಚು ಲಾಭ ಸಿಗುತ್ತದೆ. ಈ ಪ್ರದೇಶದಲ್ಲಿ ಚಿಕ್ಕ ಪ್ರಮಾಣದಲ್ಲಿ ಅಡಕೆ, ತೆಂಗು ಹಾಗೂ ಕಾಳುಮೆಣಸನ್ನು ಬೆಳೆಯುತ್ತಾರೆ. ಬಯಲುನಾಡಿನ ಸಮತಟ್ಟಾದ ಪ್ರದೇಶದಲ್ಲಿ ಕೃಷಿ ಅಥವಾ ತೋಟಗಾರಿಕೆ ಮಾಡುವುದಕ್ಕೆ ಹೋಲಿಸಿದರೆ, ಗುಡ್ಡಗಾಡಿನ ಕಿರುಪ್ರದೇಶದಲ್ಲಿ ಕೃಷಿ–ತೋಟಗಾರಿಕೆ ಮಾಡಲು ವಿಶೇಷ ಪಾರಂಪಾರಿಕ ಜ್ಞಾನ ಬೇಕು. ತಮ್ಮ ಕುಟುಂಬಕ್ಕೆ ಬೇಕಾದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾವಿರಾರು ಕುಟುಂಬಗಳು ಅಹೋರಾತ್ರಿ ಶ್ರಮಿಸಬೇಕಾಗುತ್ತದೆ.

ಹಾಲಕ್ಕಿ ಸಮುದಾಯದವರು ನಾಲ್ಕೈದು ಗುಂಟೆಗಳಲ್ಲಿ ವಿಶಿಷ್ಟ ರುಚಿಯ ತರಕಾರಿ ಮತ್ತು ಹೂಗಳನ್ನು ಬೆಳೆದು ಜೀವನ ಸಾಗಿಸುತ್ತಾರೆ. ಇಂತಹ ಪ್ರದೇಶದಲ್ಲಿ ಕೃಷಿ ಮತ್ತು ತೋಟಗಾರಿಕೆಯನ್ನು ಸಮರ್ಥವಾಗಿ, ಲಾಭದಾಯಕವಾಗಿಸಿಕೊಳ್ಳಲು ತುಂಬಾ ಬುದ್ಧಿವಂತಿಕೆ ಮತ್ತು ಶ್ರಮ ಬೇಕು. ಇವೆರಡಿದ್ದರೆ ಸಾಲದು, ಮಳೆಗಾಲ ಹೊರತುಪಡಿಸಿ, ಬಾಕಿ ಇಡೀ ವರ್ಷ ನಿಯಮಿತವಾಗಿ ಸಿಹಿನೀರು ಬೇಕು. ಇದಕ್ಕೆ ಇಲ್ಲಿನ ಜನ ನಂಬಿಕೊಂಡಿರುವುದು ಶರಾವತಿ ನದಿಯನ್ನು. ಈ ಶರಾವತಿ ನದಿಯ ನೀರು ಇಡೀ ಹೊನ್ನಾವರದ ನಗರ ಪ್ರದೇಶ, ಕರ್ಕಿ, ಮಂಕಿ ಹಾಗೂ ಮುರ್ಡೇಶ್ವರಕ್ಕೆ ಕುಡಿಯುವ ನೀರಿನ ಮೂಲ. ಇಡೀ ತಾಲ್ಲೂಕು ಶರಾವತಿ ನದಿಯ ಆರೋಗ್ಯ ಹಾಗೂ ಅದರ ಹರಿವಿನ ಮೇಲೆ ಅವಲಂಬಿತವಾಗಿದೆ.

## ಎಷ್ಟೊಂದು ಪರ್ಯಾಯ ಮಾರ್ಗಗಳಿವೆ!

ಬೆಳಗಿನ ಹಾಗೂ ಸಂಜೆಯ ಎರಡು ತಾಸಿನಲ್ಲಿ ವಿದ್ಯುತ್ತಿಗೆ ಅತಿ ಹೆಚ್ಚು ಬೇಡಿಕೆ ಇರುವ ಹೊತ್ತಿನಲ್ಲಿ ವಿದ್ಯುತ್ ಪೂರೈಸಲು ನಿರ್ಮಿಸಲಾಗುವ ಈ ಯೋಜನೆಗೆ ಪರ್ಯಾಯ ಹಾಗೂ ಸುಲಭದ ಪರಿಹಾರವಿಲ್ಲವೇ ಎಂಬುದನ್ನು ನೋಡೋಣ. ನಾಗರಿಕ ಸಮಾಜಕ್ಕೆ ಹೊರೆಯಾಗದ ಹಾಗೂ ಅರಣ್ಯ, ಜೀವವೈವಿಧ್ಯ ನೆಲೆಗಳನ್ನು ನಾಶ ಮಾಡದೇ ಇರುವ ಪರ್ಯಾಯ ಮಾರ್ಗಗಳನ್ನು ಅಳವಡಿಸಿಕೊಳ್ಳಲು ಕರ್ನಾಟಕ ವಿದ್ಯುತ್ ನಿಗಮ ಚಿಂತಿಸದಿರುವುದು ದುರದೃಷ್ಟಕರ.

ಮೈಸೂರಿನ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಬೀದಿ ದೀಪಗಳ ಕುರಿತಾಗಿ ಒಂದು ಅಧ್ಯಯನವನ್ನು ಈ ಹಿಂದೆ ನಡೆಸಿದ್ದರು. ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ ಮಿತಿಗಿಂತ ಸುಮಾರು 2.5 ಪಟ್ಟು ಹೆಚ್ಚು ಬೆಳಕನ್ನು ಮೈಸೂರಿನ ಬೀದಿ ದೀಪಗಳು ಬೆಳಗುತ್ತವೆ ಎಂಬುದನ್ನು ಕಂಡುಕೊಂಡರು. ಎಲ್ಲಾ ನಗರಗಳ ಬೀದಿದೀಪಗಳು ಈ ಮಾದರಿಯೇ ಇರುವುದಾದಲ್ಲಿ, ಮಿತಿಗಿಂತ ಹೆಚ್ಚು ಬೆಳಕನ್ನು ನೀಡುವ ಹಾಗೂ ಹೆಚ್ಚು ವಿದ್ಯುತ್ತನ್ನು ಬಳಸಿಕೊಳ್ಳುವ ಈ ಮಾದರಿಯನ್ನು ಸುಧಾರಿಸಿದಲ್ಲಿ, ವಿದ್ಯುತ್ ಬೇಡಿಕೆ ಕಡಿಮೆಯಾಗಲಿದೆ. ವಿದ್ಯುತ್ ಸಾಗಣಿಕೆ ಮತ್ತು ಸರಬರಾಜು ಪ್ರಕ್ರಿಯೆಯಲ್ಲಿ ಸೋರಿಕೆ ಪ್ರಮಾಣ ಹಾಲಿ ಶೇ.18ರಷ್ಟು ಇದ್ದು, ಈ ಪ್ರಮಾಣವನ್ನು ಶೇ.8 ರಿಂದ ಶೇ. 5ಕ್ಕೆ ಇಳಿಸುವ ಸಾಧ್ಯತೆಗಳಿವೆ. ಈ ಕ್ರಮವೂ ಹೆಚ್ಚಿನ ವಿದ್ಯುತ್ ಬೇಡಿಕೆಯನ್ನು ಪೂರೈಸುವಲ್ಲಿ ತನ್ನ ಕೊಡುಗೆಯನ್ನು ನೀಡಲಿದೆ.

ಉದ್ಯಾನಗಳು ಹಾಗೂ ಇನ್ನಿತರ ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ರೈಲು ನಿಲ್ದಾಣ, ವಾಣಿಜ್ಯ ಮಳಿಗೆಗಳು, ಕಾರ್ಖಾನೆಗಳು, ಶೈಕ್ಷಣಿಕ ಸಂಸ್ಥೆಗಳು, ಸರ್ಕಾರಿ ಕಚೇರಿಗಳು, ವಿಮಾನ ನಿಲ್ದಾಣ, ಸ್ಟೇಡಿಯಂ, ವಾಚನಾಲಯ ಇತ್ಯಾದಿಗಳಲ್ಲಿ ಸೋಲಾರ್ ಅಳವಡಿಕೆಯಿಂದ ಕೊರತೆಯಾಗುವ ವಿದ್ಯುತ್ತನ್ನು ಪಡೆಯಬಹುದಾಗಿದೆ. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ದೊಡ್ಡ ಮಾಲ್‌ಗಳಲ್ಲಿನ ಶೀತಲ ಯಂತ್ರಗಳು ಕಡಿಮೆ ವಿದ್ಯುತ್ ಬೇಡಿಕೆ ಇರುವ ಹೊತ್ತಿನಲ್ಲಿ ಸ್ವಯಂಚಾಲಿತವಾಗುತ್ತವೆ ಹಾಗೂ ಹೆಚ್ಚು ವಿದ್ಯುತ್ ಬೇಡಿಕೆ ಇರುವ ಹೊತ್ತಿನಲ್ಲಿ ಸ್ವಯಂಚಾಲಿತವಾಗಿ ನಿಲ್ಲುತ್ತವೆ. ಈ ತಂತ್ರಜ್ಞಾನವನ್ನು ಮನೆಗಳಲ್ಲೂ ಅಳವಡಿಸಿಕೊಂಡು ಮೂಲಕ ವಿದ್ಯುತ್ ಬೇಡಿಕೆ ತಗ್ಗಿಸಬಹುದು.

ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್ (BESS) ಎಂಬ ಮಾದರಿಯನ್ನು ನದಿಗಳೇ ಇಲ್ಲದ ಅರಬ್ ಮತ್ತಿತರೆ ದೇಶಗಳಲ್ಲಿ ವ್ಯಾಪಕವಾಗಿ ಬಳಸಿಕೊಳ್ಳಲಾಗುತ್ತಿದೆ. ಕಡಿಮೆ ವಿದ್ಯುತ್ ಬೇಡಿಕೆ ಇರುವ ಸಮಯದಲ್ಲಿ ಉತ್ಪಾದನೆಯಾಗುವ ಹೆಚ್ಚುವರಿ ವಿದ್ಯುತ್ತನ್ನು ನೇರವಾಗಿ ಬ್ಯಾಟರಿಗಳಲ್ಲಿ ಸಂಗ್ರಹಿಸುವುದು ಹಾಗೂ ಹೆಚ್ಚು ಬೇಡಿಕೆ ಇರುವ ಹೊತ್ತಿನಲ್ಲಿ ಸಂಗ್ರಹಿಸಿಟ್ಟ ವಿದ್ಯುತ್ತನ್ನು ಬಳಸಿಕೊಳ್ಳುವುದು. ಈ ಮಾದರಿಗೆ ಯಾವುದೇ ಹೊಸ ಅರಣ್ಯ ಪ್ರದೇಶವನ್ನು ನಾಶ ಮಾಡುವ ಅಗತ್ಯವಿರುವುದಿಲ್ಲ. ಈ ಮಾದರಿಯನ್ನು ಎಲ್ಲಿ ಹೆಚ್ಚು ವಿದ್ಯುತ್ ಬೇಡಿಕೆ ಇರುತ್ತದೆಯೋ ಅಲ್ಲಿಯೇ ಅಳವಡಿಸಿಕೊಳ್ಳಬಹುದು. ಉದಾಹರಣೆಗೆ ಬೆಂಗಳೂರಿಗೆ ಹೆಚ್ಚು ವಿದ್ಯುತ್ ಬೇಡಿಕೆಯಿದ್ದು, ಈ ತಂತ್ರಜ್ಞಾನವನ್ನು ಅಲ್ಲಿಯೇ ಅಳವಡಿಸಿಕೊಳ್ಳಲು ಅವಕಾಶಗಳಿವೆ.

ಇವೆಲ್ಲದರ ಹೊರತಾಗಿ, ಈ ಯೋಜನೆ ಜಾರಿಯಾದಲ್ಲಿ ಶರಾವತಿ ನದಿಯಲ್ಲಿ ನೀರಿನ ಹರಿವು ಕಡಿಮೆಯಾಗಲಿದ್ದು, ಇಡೀ ಹೊನ್ನಾವರದ ಸಾಮಾಜಿಕ ಭದ್ರತೆಗೆ ಧಕ್ಕೆಯಾಗುತ್ತದೆ. ಸಾವಿರಾರು ಕುಟುಂಬಗಳು ಬದುಕಿನ ನೆಲೆ ಕಳೆದುಕೊಳ್ಳಲಿದ್ದು, ಜಲಚರಗಳ ಕೊರತೆಯಿಂದಾಗಿ ಬೆಸ್ತರ ಬದುಕು ಹೈರಾಣಾಗಲಿದೆ. ಜೊತೆಗೆ ಹಣಕಾಸು ವಹಿವಾಟು ನಡೆಸುವ ಸರ್ಕಾರಿ ಕೃಷಿ ಉತ್ಪನ್ನ ಮಾರುಕಟ್ಟೆಯ ವ್ಯವಹಾರಗಳು ಹೊನ್ನಾವರದಲ್ಲಿ ತಾಲ್ಲೂಕಿನ ಬೆಳೆಯಲಾಗುವ ಅಡಕೆ, ತೆಂಗು ಮತ್ತು ಕಾಳುಮೆಣಸನ್ನೇ ನಂಬಿಕೊಂಡಿದ್ದು, ಅಲ್ಲಿನ ಆರ್ಥಿಕತೆಯೂ ಕುಸಿದುಹೋಗಲಿದೆ.

## ಅಣೆಕಟ್ಟು -ಬಂಧಕ್ಕೆ ಬಿಡುಗಡೆ ಎಂದು?

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಜಾರಿ ಮಾಡಿಯೇ ತೀರುತ್ತೇವೆ ಎಂದು ಕೆಪಿಸಿಎಲ್ ಹಟ ಹಿಡಿದ ಹೊತ್ತಿನಲ್ಲೇ, ಅನಗತ್ಯವಾದ, ಅಸಾಧುವಾದ ಹಾಗೂ ನಾಗರಿಕ ಸಮಾಜಕ್ಕೆ ಆರ್ಥಿಕವಾಗಿ ಹೊರೆಯಾಗಲಿರುವ, ಪರಿಸರ ವಿನಾಶದ ಈ ಯೋಜನೆ ಬೇಡವೆಂಬ ಕೂಗು ಉತ್ತರಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ಜೋರಾಗಿಯೇ ಎದ್ದಿದೆ. ಹೋರಾಟವನ್ನು ಮಾಡಿಯಾದರೂ ಈ ಯೋಜನೆಯನ್ನು ನಿಲ್ಲಿಸಬೇಕು ಎಂಬುದು ಎರಡೂ ಜಿಲ್ಲೆಗಳ ಪ್ರಜೆಗಳ ಸದ್ಯದ ಮನಸ್ಥಿತಿ. ಇದಕ್ಕಾಗಿ ಹೊಸನಗರ ತಾಲ್ಲೂಕಿನ ಮೂಲೆಗದ್ದೆ ಮಹಾಸಂಸ್ಥಾನದಲ್ಲಿ ಇತ್ತೀಚೆಗೆ ಸಾರ್ವಜನಿಕ ಸಭೆ ಏರ್ಪಡಿಸಲಾಗಿತ್ತು. ಶರಾವತಿ



ಕಿರು ಜಲವಿದ್ಯುತ್ ಯೋಜನೆಯ ಅಣೆಕಟ್ಟಿನ ಕೆಳಭಾಗ. ಇರುವೆಗೂ ಕುಡಿಯಲು ನೀರಿಲ್ಲ!